**ಕರ್ನಾಟಕ ಸರ್ಕಾರ**

ಸಂ:ಗ್ರಾಅಪ 27 ಗ್ರಾನೀಸ (4) 14

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:7.5.2014

**ಸುತ್ತೋಲೆ**

ವಿಷಯ: **2013–14ರ** ಸಾಲಿನಲ್ಲಿ ಪ್ರಸ್ತಾಪಿಸಲಾದ ತುರ್ತು ಕ್ರಿಯಾ ಯೋಜನೆ ಅನುಷ್ಠಾನ ಕುರಿತು.

---

1. **2013–14ರ** ಸಾಲಿನಲ್ಲಿ ವಿವಿಧ ಜಿಲ್ಲಾ ಪಂಚಾಯತಿಗಳಿಂದ ಸಾರ್ವಜನಿಕ ತುರ್ತು ಕುಡಿಯುವ ನೀರಿನ ವ್ಯವಸ್ಥೆ ಸಲುವಾಗಿ ಆಯಾ ಜಿಲ್ಲಾ ಪಂಚಾಯತಿಗಳು CE/PRED ಮುಖೇನ ಸಲ್ಲಿಸಿದ್ದ ಪ್ರಸ್ತಾವನೆಗಳನ್ನು ಪರಿಶೀಲಿಸಿ NRDWP ಮಾರ್ಗಸೂಚಿಗಳನ್ವಯ ಅರ್ಹವಿದ್ದ ಪ್ರಸ್ತಾಪಗಳಿಗೆ ಈಗಾಗಲೇ ಅನುಮೋದನೆ ನೀಡಿದೆ. ಅವುಗಳನ್ನು ಸರ್ಮಪಕವಾಗಿ ಅನುಷ್ಠಾನಗೊಳಿಸಿ, ಆರ್ಥಿಕ ಮತ್ತು ಭೌತಿಕ ಪ್ರಗತಿ ವಿವರಗಳನ್ನು IMIS ಮತ್ತು ಗ್ರಾಅಪಂ.ರಾಜ್ ಇಲಾಖೆಯ ಗಾಂಧಿ ಸಾಕ್ಷಿ ಕಾಯಕದಲ್ಲಿ ಸರ್ಮಪಕವಾಗಿ ನಮೂದಿಸಬೇಕು. ಜೊತೆಗೆ, ಈ ಸಂಬಂಧ ಸೃಜಿಸಿದ ಆಸ್ತಿದಾಯಿತ್ವಗಳನ್ನು ಆಯಾ ಗ್ರಾಮ ಪಂಚಾಯತಿಗಳ ವಶಕ್ಕೆ (ಅಸೆಟ್ ರೆಜಿಸ್ಟರ್ ಮೇನ್‌ಟೆನೆನ್ಸ್ ಸಲುವಾಗಿ) ಮುಂದಿನ ಕಾರ್ಯಾಚರಣೆ ಮತ್ತು ನಿರ್ವಹಣೆ ಸಲುವಾಗಿ ಹಸ್ತಾಂತರಿಸಬೇಕು.

2. **2013–14ರ** ಸಾಲಿನಲ್ಲಿ ಜಿಲ್ಲಾ ಪಂಚಾಯತಿಗಳು ಸಲ್ಲಿಸಿದ್ದ ತುರ್ತು ಕ್ರಿಯಾ ಯೋಜನೆ ಪೈಕಿ ಕೆಲವು ಕಾಮಗಾರಿಗಳು ಪುನರಾವರ್ತನೆಯಾಗಿದ್ದು ಮತ್ತು ಕೆಲವು NRDWP ಮಾರ್ಗಸೂಚಿಗಳ ವ್ಯಾಪ್ತಿಗೆ ಬಾರದಿದ್ದ ಕಾರಣಗಳಿಂದ **ಅನುಮೋದನೆಯಾಗಿರುವುದಿಲ್ಲ.**

3. **ಅಂತಹ ಕಾಮಗಾರಿಗಳು ದಿ:1.4.2014 YDU ಪ್ರಕಾರ <100% coverage ವರ್ಗದಡಿ ಬಂದಲ್ಲಿ 2014–15ರ ಸಾಲಿನ ಕ್ರಿಯಾ ಯೋಜನೆ ತಯಾರಿಕೆ ಮಾರ್ಗಸೂಚಿ (ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 12 ಗ್ರಾನೀಸ(2) 14, ದಿ:10.4.2014) ಗಳನ್ವಯ ಅಳವಡಿಸಿಕೊಳ್ಳಲು ಅನುಮತಿ ನೀಡಿದೆ.**

4. **ಒಂದು ವೇಳೆ ಮೇಲ್ಕಂಡ ವರ್ಗದಡಿ ಸಮಸ್ಯಾತ್ಮಕ ಜನವಸತಿಗಳು ದಿ:1.4.2014 YDU ಪ್ರಕಾರ 100% coverage ಇದ್ದಲ್ಲಿ, ಅಂತರ್ಜಲ ಮಟ್ಟ ಕುಸಿದ ಕಾರಣ, ಕುಡಿಯುವ ನೀರಿನ ಸಮಸ್ಯೆಯಿದ್ದಲ್ಲಿ ಸರ್ಕಾರವು ಆದೇಶ ಸಂಖ್ಯೆ: ಗ್ರಾಅಪ 68 ಗ್ರಾನೀಸ(4) 2014, ದಿ:26.4.2014ರಲ್ಲಿ ಬಿಡುಗಡೆ ಮಾಡಿರುವ ರೂ.100ಕೋಟಿ ಅನುದಾನದಿಂದ ಸದರಿ ತುರ್ತು ಕಾಮಗಾರಿಗಳನ್ನು ಕೈಗೆತ್ತಿಕೊಂಡು ರಾಜ್ಯ ವಲಯದಡಿ ಬಿಲ್ ಪಾವತಿಸಲು ಅನುಮತಿ ನೀಡಿದೆ.** ಈಗಾಗಲೇ ಬಿಡುಗಡೆಯಾಗಿರುವ ಅನುದಾನ ಸಾಕಾಗದಿದ್ದಲ್ಲಿ ಜಿಲ್ಲಾಧಿಕಾರಿಗಳ ವ್ಯಾಪ್ತಿಯಲ್ಲಿರುವ SDRF/NDRFನಡಿ ಅನುದಾನ ಪಡೆದುಕೊಳ್ಳಬಹುದು. ಜಿಲ್ಲಾಧಿಕಾರಿಗಳಿಂದಲೂ ನಿರೀಕ್ಷಿತ ಪ್ರಮಾಣದಲ್ಲಿ ಅನುದಾನ ಲಭ್ಯವಾಗದಿದ್ದಲ್ಲಿ ಮಾತ್ರ ಅವರ ಧೃಡೀಕರಣದೊಂದಿಗೆ ಇಂತಹ ಅವಶ್ಯಕ ಕಾಮಗಾರಿಗಳ ಪಟ್ಟಿಯನ್ನು ಆಯಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸರ್ಕಾರಕ್ಕೆ CE/PRED ಮುಖೇನ ಹೆಚ್ಚುವರಿ ಅನುದಾನಕ್ಕೆ ಪ್ರಸ್ತಾಪಿಸಬಹುದೆಂದು ತಿಳಿಸಿದೆ.

5. ಜೊತೆಗೆ, ಅನಾವಶ್ಯಕವಾಗಿ ಕೊಳವೆ ಬಾವಿಗಳನ್ನು ಕೊರೆದು ತತ್ಸಂಬಂಧದ ಪೈಪ್‌ಲೈನ್ ಕಾಮಗಾರಿ, ಪಂಪ್ ಮೋಟಾರ್, ವಿದ್ಯುದ್ಧೀಕರಣ ಇತ್ಯಾದಿಗಳನ್ನು ಕೈಕೊಳ್ಳಲು ಹೆಚ್ಚುವರಿ ವೆಚ್ಚ ಮಾಡುವ

........2

ಬದಲು, ಹೆಚ್ಚಿನ ವೆಚ್ಚ ಮತ್ತು ವಿಳಂಬ ತಪ್ಪಿಸಲು **ಪರ್ಯಾಯವಾಗಿ ಖಾಸಗಿ ಬೋರ್‌ವೆಲ್‌ಗಳ ಸೇವೆ ಪಡೆಯುವುದು, ಸಾಗಾಣಿಕೆ ಮುಖೇನ ನೀರು ಪೂರೈಸುವುದು, ಹೈಡ್ರೋ-ಫ್ರಾಕ್ಚರಿಂಗ್ ಮಾಡುವುದು, ಹಾಲಿಯಿರುವ ಕೊಳವೆ ಬಾವಿಗಳನ್ನು ಫ್ಲಷಿಂಗ್ ಮತ್ತು ಡೀಪನಿಂಗ್ ಮಾಡುವ ಪ್ರಕ್ರಿಯೆಗಳನ್ನು ಅನುಸರಿಸಬೇಕೆಂದು ತಿಳಿಸಿದೆ.**

6. ಇದರ ಜೊತೆಗೆ ಪ್ರಸಕ್ತ ಬೇಸಿಗೆಯಲ್ಲಿ **ಸಾಗಾಣಿಕೆ ಮುಖೇನ** ನೀರು ಪೂರೈಕೆಯಾಗುತ್ತಿರುವ ಜನವಸತಿಗಳು **ಮತ್ತು** YDU ಪ್ರಕಾರ ನೀರಿನ **ಗುಣಮಟ್ಟದ ಸಮಸ್ಯೆಗೊಳಗಾಗಿರುವುದು ಧೃಡಪಟ್ಟಿರುವ** ಜನವಸತಿಗಳಿಗೆ ಪರ್ಯಾಯ ಜಲಮೂಲಗಳನ್ನು ಒದಗಿಸಲು ಆದ್ಯತೆ ನೀಡಬೇಕು. ಇಂತಹ ಕಾಮಗಾರಿಗಳನ್ನು ಸ್ಥಳೀಯ ಅಗತ್ಯತೆ ಆಧರಿಸಿ, ಅನುಷ್ಠಾನ ಕೈಗೆತ್ತಿಕೊಂಡು **2014-15ರ** ಸಾಲಿನ **NRDWP-Coverage & WQ** ಘಟಕದಡಿ ಬಿಲ್ ಪಾವತಿಸಲು ಕ್ರಮವಹಿಸಬಹುದು.

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಫೋನ್:080-22032806, ಫ್ಯಾಕ್ಸ್:22203175
ಇಮೇಲ್: rk3452000@gmail.con

**ಇವರಿಗೆ:**

1. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ (30) ಜಿಲ್ಲೆಗಳ ಜಿಲ್ಲಾಧಿಕಾರಿಗಳು.
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಸಂಕೀರ್ಣ, ನಂ.55, 4ನೇ ಮಹಡಿ, ಅಭಯ ಕಾಂಪ್ಲೆಕ್ಸ್, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂ-20.
4. ರಾಜ್ಯದ ಎಲ್ಲಾ (8) ಅಧೀಕ್ಷಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವೃತ್ತ, ಬೆಂಗಳೂರು.
5. ರಾಜ್ಯದ ಎಲ್ಲಾ (38) ಕಾರ್ಯಪಾಲಕ ಇಂಜಿನಿಯರ್‌ಗಳು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳು, ಮತ್ತು
6. ರಾಜ್ಯದ ಎಲ್ಲಾ (176) ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿವಾಹಕ ಅಧಿಕಾರಿಗಳು.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು ಹಾಗೂ ಗ್ರಾಅಪಂ.ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳು, ಆಂತರಿಕ ಆರ್ಥಿಕ ಸಲಹೆಗಾರರು ಇವರ ಆಪ್ತ ಕಾರ್ಯದರ್ಶಿಗಳು / ಆಪ್ತ ಸಹಾಯಕರುಗಳು.
4. ನಿರ್ದೇಶಕರು SWSM, ಕಾವೇರಿ ಭವನ, ಬೆಂಗಳೂರು-9.
5. ನಿರ್ದೇಶಕರು, SIRD, ಗ್ರಾಅಪಂ.ರಾಜ್ ಇಲಾಖೆ, ಮೈಸೂರು.
6. ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಅಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.